ಆಷ್ಟನ್ನೂ ಪೂರೈಸಿಲ್ಲ. ಮೇಜರ್ ಇರಿಗೇಷನ್ ಸ್ಕೀಮುಗಳನ್ನು ಇನ್ನೂ ಸ್ವಲ್ಪ ತೆಗೆದುಕೊಳ್ಳಬೇಕಾಗಿದೆ. ಕೈಗೆ ತೆಗೆದುಕೊಂಡಿರುವುದರಲ್ಲಿ ಈಗತಾನೇ ಕೆಲಸ ಪ್ರಾರಂಭವಾಗಿ ಅನೇಕ ಹಂತಗಳಲ್ಲಿ ನಿಂತಿವೆ. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಅಭಿಪ್ರಾಯವೇನೆಂದರೆ, ಕೈಗೆತ್ತಿಕೊಂಡಿರುವ ಯೋಜನೆಗಳಿಗೆಲ್ಲ ಹಣವನ್ನು ಒದಗಿಸತಕ್ಕ ವಿಧಾನ ಯಾವುದು ಎಂದು ಬಹಳ ಕ್ಷೀಣವಾಗಿ ಯೋಚನೆ ಮಾಡಬೇಕಾಗಿದೆ. ಇದುವರೆಗೂ ಹಣವನ್ನು ಒದಗಿಸತಕ್ಕ ನೀತಿ ಏನಿತ್ತು ಎಂದರೆ ಸಂಸ್ಥಾನದ ರಿಸೋರ್ಸಸ್‌ನಿಂದ ಮಾತ್ರ ಹಣವನ್ನು ಖರ್ಚು ಮಾಡಿ ಕಟ್ಟಬೇಕು ಎಂದು ಕೇಂದ್ರದವರು ಹೇಳಿಕೊಂಡು ಬಂದಿದ್ದಾರೆ. ಮಲಪ್ರಭ, ಘಟಪ್ರಭ, ಅಪ್ಪರ್ ಕೃಷ್ಣ ಯೋಜನೆಗಳಿಗೆ ಮಾತ್ರ ಕೇಂದ್ರದವರು ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಹಾರಂಗಿ, ಹೇಮಾವತಿ ಇಂಥವುಗಳಿಗೆ ಕೊಟ್ಟಿಲ್ಲ. ಇವುಗಳಲ್ಲಿ ಕೆಲವನ್ನು ನಾವು ತೆಗೆದುಕೊಂಡಿದ್ದೇವೆ. ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿರುವುದಕ್ಕೆ ಸ್ವಲ್ಪ ಹಣವನ್ನು ಕೇಂದ್ರದಿಂದ ಒದಗಿಸುತ್ತಾರೆ. ಐದನೆಯ ಯೋಜನೆಯಲ್ಲಿ ಎಷ್ಟು ಒದಗಿಸುತ್ತಾರೆ ಅದರ ಚೌಕಟ್ಟಿನಲ್ಲಿ ಕೆಲಸ ಮಾಡಿ ಎಂದು ಹೇಳಿಬಿಡಿ. ಈಗ ಇದರ ಬಗ್ಗೆ ಬಹಳ ಹೆಚ್ಚಾಗಿ ಲಕ್ಷ್ಯ ಕೊಡಬೇಕು. - ಕೇಂದ್ರದಿಂದ ಪ್ಲಾನಿನ ಹೊರಗೆ ಹಣವನ್ನು ಕೊಡಿ ಎಂದು ಕೇಳುತ್ತಿದ್ದೇವೆ ಅಥವಾ ಒಂದು ಪ್ರತ್ಯೇಕವಾದ ಪ್ಲಾನ್, ಇರಿಗೇಷನ್ ಡೆವಲಪ್‌ಮೆಂಟಿಗಾಗಿ ಮಾಡಿ ಎಂದು ಕೇಳುತ್ತಿದ್ದೇವೆ. ಅದರ ಜೊತೆಗೆ ಆರನೇ ಪಂಚವರ್ಷೀಯ ಆಯೋಗ ಬಂದಾಗ ಅಲ್ಲಿಯೂ ಹೆಚ್ಚು ಹಣವನ್ನು ಕೊಡಲು ಕೇಳಿಬೇಕೆಂದಿದ್ದೇವೆ. ನಮ್ಮ ದೃಷ್ಟಿಕೋನವೇನಿದೆ, ನಮ್ಮ ಕಾರ್ಯವ್ಯಾಪ್ತಿ ಎಷ್ಟಿದೆ, ನಮಗೆ ಹಿಂದೆ ಎಷ್ಟು ಕಡಿಮೆಯಾಯಿತು, ಹೆಚ್ಚು ಹಣವನ್ನು ಹೇಗೆ ಪಡೆಯಬೇಕು ಎನ್ನುವುದರ ಕಡೆಗೆ ಪ್ರಯತ್ನ ಮಾಡುತ್ತೇವೆ. ಬೆಟರ್‌ಮೆಂಟ್ ಲೆವಿ ಇದೆ. ಅದು ಹತ್ತು ವರ್ಷದಿಂದ ಒಂದಲ್ಲ ಒಂದು ಕಾರಣಕ್ಕಾಗಿ ಒಂದು ಸಾರಿಯಲ್ಲ, ಎರಡು ಸಾರಿ ಸಭೆಯ ಮುಂದೆ ಬಂದು ತಿದ್ದುಪಡಿಯಾಗಿ ಕಾನೂನು ಜಾರಿಗೆ ಬರುವುದು ತಡವಾಗಿ, ಕಾಂಕ್ರೀಮಕ್ಕಳಿಗೆ ಅಂತೂ ರಾಜ್ಯವಿಲ್ಲ' ಎನ್ನುವಂತಾಗಿ, ಬೆಟರ್‌ಮೆಂಟ್ ಲೆವಿಯಿಂದ ಪೂರಾ ಕಾನೂನುಬಂದಿಲ್ಲ. ಇದರಿಂದ ಸಾಕಷ್ಟು ಹಣ ಹತ್ತಾರು ಕೋಟಿ ರೂಪಾಯಿ ಬಂದಿದ್ದರೆ ಅದನ್ನು ಪ್ರಾಜೆಕ್ಟ್‌ಗಳ ಮೇಲೆ ಹಾಕಬಹುದಾಗಿತ್ತು. ಇದನ್ನೆಲ್ಲ ದೃಷ್ಟಿಯಲ್ಲಿಟ್ಟುಕೊಂಡು ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ನೀರಾವರಿಗೆ ಪ್ರಥಮ ಸ್ಥಾನ ಕೊಡಬೇಕು ಎನ್ನುವುದು ನಮ್ಮ ಒಂದು ಧ್ಯೇಯ

LOSS IN CO-OPERATIVE SOCIETIES IN BANGALORE

334. Sri M. B. RAMASWAMY (Anekal) :—

Will the Minister for Co-operation be pleased to state :—

(*a*) the amount of total loss incurred by the Co-operative Societies in Bangalore District;

(*b*) the total amount misappropriated by the office bearers of the societies and officials appointed by the Bangalore District Co-operative Central Bank Limited;

(*c*) the number of Bank Supervisors involved in the defaulcation or misappropriation of funds of the Societies in Bangalore District ?

Sri A. SHANKARA ALVA (Minister for Co-operation) :—

(*a*) The amount of total loss incurred by the Co-operative Societies in Bangalore District is : Rs. 25,34,997-67.

(SRI A. SHANKARA ALVA)

(*b*) The total amount allegedly misappropriated by the office bearers of societies and officials appointed by the Bangalore District Co-operative Central Bank Limited is: Rs. 14,60,286-47.

(*c*) 13 Bank Supervisors and 1 Branch Manager of the District Central Co-operative Bank are involved in misappropriation of funds.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ತಾವು (ಅ)ಗೆ ಉತ್ತರವಾಗಿ ಬೆಂಗಳೂರು ಜಿಲ್ಲೆಯ ಸಹಕಾರಿ ಸಂಘಗಳಿಗೆ ಉಂಟಾದ ನಷ್ಟದ ಹಣವು 25,34,997-67 ರೂಪಾಯಿಗಳಾಗಿರುತ್ತದೆ ಎಂದು ಹೇಳಿದ್ದೀರಿ. ಈ ರೀತಿ ಮಿಸ್‌ಅಪ್ರೊಪ್ರಿಯೇಷನ್ ಆಗಿರುವ ಬಗ್ಗೆ ಅವರ ಮೇಲೆ ಏನೇನು ಕಾರ್ಯಕ್ರಮ ಕೈಗೊಂಡಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅವರ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, (ಇ)ಗೆ ಉತ್ತರವಾಗಿ ಹಣದ ದುರುಪಯೋಗದ ಪ್ರಕರಣದಲ್ಲಿ ಬೆಂಗಳೂರು ಜಿಲ್ಲಾ ಕೇಂದ್ರೀಯ ಸಹಕಾರಿ ಬ್ಯಾಂಕಿನ 13 ಮೇಲ್ವಿಚಾರಕರು ಹಾಗು ಒಬ್ಬ ಬ್ಯಾಂಕ್ ಶಾಖೆಯ ಅಧಿಕಾರಿಗಳು ಒಳಗೊಂಡಿರುತ್ತಾರೆ ಎನ್ನುವ ಪಟ್ಟಿಯನ್ನು ಇಲ್ಲಿ ಇಟ್ಟಿದ್ದೀರಿ. ಮತ್ತು ಅವರ ಬಗ್ಗೆ ಸಿವಿಲ್ ಮತ್ತು ಕ್ರಿಮಿನಲ್ ಮೊಖದ್ದಮೆಗಳನ್ನು ಹಾಕಲಾಗಿದೆ ಎಂದು ಹೇಳಿದ್ದೀರಿ. ಇದು ಯಾವ ಯಾವ ಹಂತದಲ್ಲಿದೆ ಎನ್ನುವುದು ತಿಳಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಇದು ಯಾವ ಯಾವ ಹಂತದಲ್ಲಿದೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಆದರೆ ಅವರ ಬಗ್ಗೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕಲಾಗಿದೆ ಎಂದು ಹೇಳುತ್ತೇನೆ.

ESTABLISHMENT OF INDUSTRIES IN BIDAR DISTRICT

357. Sri V. N. PATIL (Humnabad).—

Will the Minister for Industries be pleased to state:—

(*a*) the type of industries that could be established in Bidar District (information regarding small scale or otherwise with taluk-wise figures may be furnished);

(*b*) whether the Government has got any plans and schemes at present to be implemented during the course of the current financial years;

(*c*) whether any such schemes are under the consideration of the Government for including in the next financial years; if so, what are the industries and the places where they will be established (talukwise figures may be furnished)?